417

# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1083 |
| 2. ಸದಸ್ಯರ ಹೆಸರು | : | ಶ್ರೀ ಬಿ.ಜಿ.ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3. ಉತ್ತರಿಸಬೇಕಾದ ದಿನಾಂಕ | : | 14.12.2023. |
| 4. ಉತ್ತರಿಸುವ ಸಚಿವರು | : | ಮಾನ್ಯ ಮುಖ್ಯಮಂತ್ರಿಗಳು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಸರ್ಕಾರ ಘೋಷಣೆ ಮಾಡಿರುವ 5 ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಸಂಖ್ಯೆ ಎಷ್ಟು. | ಗ್ಯಾರಂಟಿ ಯೋಜನೆಗಳಾದ ಗೃಹಜ್ಯೋತಿ, ಗೃಹಲಕ್ಷ್ಮಿ ಮತ್ತು ಅನ್ನಭಾಗ್ಯ ಯೋಜನೆಗೆ ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ನವೆಂಬರ್ ಅಂತ್ಯದವರೆಗು ನೋಂದಾಯಿಸಿರುವ ಫಲಾನುಭವಿಗಳ ಮಾಹಿತಿ ಕೆಳಕಂಡಂತಿದೆ. |

| ಕ್ರ.ಸಂ | ಗ್ಯಾರಂಟಿ ಯೋಜನೆ | ನವೆಂಬರ್ ಅಂತ್ಯದವರೆಗಿನ ನೋಂದಣಿ | |
|---|---|---|---|
| | | ಕಲಬುರಗಿ | ಯಾದಗಿರಿ |
| 1 | ಗೃಹ ಲಕ್ಷ್ಮಿ | 5,09,177 | 2,34,847 |
| 2 | ಗೃಹ ಜ್ಯೋತಿ | 5,60,585 | 1,29,240 |
| 3 | ಅನ್ನ ಭಾಗ್ಯ | 4,83,457 | 2,23,697 |

ಶಕ್ತಿ ಯೋಜನೆಯು ರಾಜ್ಯದ ಎಲ್ಲಾ ಹೆಣ್ಣು ಮಕ್ಕಳಿಗು ಉಚಿತ ಪ್ರಯಾಣವಿರುವುದರಿಂದ ರಾಜ್ಯದ ಎಲ್ಲಾ ಹೆಣ್ಣು ಮಕ್ಕಳು ಈ ಯೋಜನೆಯ ಫಲಾನುಭವಿಗಳಾಗಿರುತ್ತಾರೆ.

2022-23 ರಲ್ಲಿ ಪದವಿ/ ಡಿಪ್ಲೋಮಾ ತೇರ್ಗಡೆಯಾದ ದಿನಾಂಕದಿಂದ 180 ದಿನಗಳು ಕಳೆದರೂ ಉದ್ಯೋಗ ಲಭಿಸದವರು ಯುವನಿಧಿ ಯೋಜನೆಗೆ ಅರ್ಜಿ

| | | |
|---|---|---|
| | | ಸಲ್ಲಿಸಲು ಅರ್ಹರಿರುವುದರಿಂದ ಈ ಯೋಜನೆಗೆ ಈವರೆಗು ಯಾವುದೇ ನೋಂದಣಿಯಾಗಿರುವುದಿಲ್ಲ. |
| ಆ | ಸರ್ಕಾರ ಘೋಷಿಸಿದ ಈ 5 ಗ್ಯಾರಂಟಿ ಯೋಜನೆಗಳನ್ನು ಈ ಜಿಲ್ಲೆಗಳಲ್ಲಿ ಸಮರ್ಪಕವಾಗಿ ಜಾರಿಗೊಳಿಸಲಾಗಿದೆಯೇ | ಸರ್ಕಾರ ಘೋಷಿಸಿರುವ ಗ್ಯಾರಂಟಿ ಯೋಜನೆಗಳಾದ ಗೃಹಜ್ಯೋತಿ, ಗೃಹಲಕ್ಷ್ಮಿ, ಶಕ್ತಿ ಮತ್ತು ಅನ್ನಭಾಗ್ಯವನ್ನು ರಾಜ್ಯದಲ್ಲಿ ಸಮರ್ಪಕವಾಗಿ ಜಾರಿಗೊಳಿಸಲಾಗುತ್ತಿದೆ. |
| ಇ | ಈ 5 ಗ್ಯಾರಂಟಿ ಯೋಜನೆಗಳಿಂದ ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಿಗೆ ವಾರ್ಷಿಕ ಎಷ್ಟು ಹಣ ಬೇಕಾಗಬಹುದು (ವಿವರ ನೀಡುವುದು) | ಗ್ಯಾರಂಟಿ ಯೋಜನೆಗಳು ಫಲಾನುಭವಿ ಕೇಂದ್ರಿತ ಯೋಜನೆಗಳಾಗಿದ್ದು, ಫಲಾನುಭವಿಗಳ ನೋಂದಣಿಯ ಆಧಾರದ ಮೇಲೆ ಯೋಜನೆಗಳಿಗೆ ಬೇಕಾಗಿರುವ ಅನುದಾನವನ್ನು ಒದಗಿಸಲಾಗುತ್ತದೆ ಹೊರತು ಅನುದಾನವನ್ನು ಜಿಲ್ಲಾವಾರು ಒದಗಿಸುವುದಿಲ್ಲ.<br>ಗ್ಯಾರಂಟಿ ಯೋಜನೆಗಳಿಗೆ 2023-24 ರಲ್ಲಿ ಬೇಕಾಗುವ ಅನುದಾನವನ್ನು ಆಯವ್ಯಯದಲ್ಲಿ ಈ ಕೆಳಗಿನಂತೆ ಅಂದಾಜಿಸಲಾಗಿದೆ. |

| ಕ್ರ.ಸಂ | ಗ್ಯಾರಂಟಿ ಯೋಜನೆ | 2023-24 ರ ಆಯವ್ಯಯ ಅನುದಾನದ ಅಂದಾಜು (ಕೋಟಿ ರೂ.ಗಳು) |
|---|---|---|
| 1 | ಗೃಹ ಲಕ್ಷ್ಮಿ | 17,500 |
| 2 | ಗೃಹ ಜ್ಯೋತಿ | 9,000 |
| 3 | ಅನ್ನ ಭಾಗ್ಯ | 7,307 |
| 4 | ಯುವ ನಿಧಿ | 250 |
| 5 | ಶಕ್ತಿ | 2,800 |
| | ಒಟ್ಟು | **36,857** |

| | | |
|---|---|---|
| ಈ | ಇಷ್ಟು ಹಣವನ್ನು ಗ್ಯಾರಂಟಿಗಳಿಗೆ ನೀಡುವುದರಿಂದ ಜಿಲ್ಲೆಗಳಲ್ಲಿ ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಳ್ಳುವುದಿಲ್ಲವೇ? | ಗ್ಯಾರಂಟಿ ಯೋಜನೆಗಳಿಗೆ ಸರ್ಕಾರವು ಆಯವ್ಯಯದಲ್ಲಿಯೇ ಅನುದಾನ ಒದಗಿಸಿದ್ದು, ಇತರೆ ಇಲಾಖೆಗಳ ಅಭಿವೃದ್ಧಿ ಅನುದಾನವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸುತ್ತಿರುವುದಿಲ್ಲ. ಆದ್ದರಿಂದ ಇತರೆ ಇಲಾಖೆಗಳ ಅಭಿವೃದ್ಧಿ ಕಾರ್ಯಗಳಿಗೆ |

| | | |
|---|---|---|
| | (ವಿವರ ನೀಡುವುದು) | ಯಾವುದೇ ಹಿನ್ನಡೆಯಾಗಿರುವುದಿಲ್ಲ.<br>ಪ್ರಸಕ್ತ ವರ್ಷದಲ್ಲಿ ನವೆಂಬರ್ ತಿಂಗಳ ಅಂತ್ಯದವರೆಗು ವಿವಿಧ ಇಲಾಖೆಗಳಲ್ಲಿ ಅಭಿವೃದ್ಧಿ ಮತ್ತು ಕಲ್ಯಾಣ ಕಾರ್ಯಕ್ರಮಗಳಿಗೆ ಒಟ್ಟು 73,928 ಕೋಟಿ ರೂ.ಗಳ ವೆಚ್ಚವನ್ನು ಮಾಡಲಾಗಿರುತ್ತದೆ. (ಆರ್ಥಿಕ ವರ್ಷ 2022-23 ರಲ್ಲಿ ನವೆಂಬರ್ ಅಂತ್ಯಕ್ಕೆ ಅಭಿವೃದ್ಧಿ ಮತ್ತು ಕಲ್ಯಾಣ ಕಾರ್ಯಕ್ರಮಗಳಿಗೆ 70,814 ಕೋಟಿ ರೂ. ಗಳ ವೆಚ್ಚವಾಗಿರುತ್ತದೆ). |

FD/115/2023-DS-BR-FINANCE DEPT.SEC

(ಸಿದ್ದರಾಮಯ್ಯ)

ಮುಖ್ಯಮಂತ್ರಿ